ಮೈಸೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರಿ ದೇಣೇದಾರ ಶ್ರೀರಂಗಪಟ್ಟಣ ತಾಲ್ಲೂಕು ಬಳಗುಳದಲ್ಲಿ ಇರುವ ಕೆಂಪೇಗವ್ವಡನ ವಿಷಯದಲ್ಲಿ—

ಸ॥ 1889ನೇ ಇಸವಿ ದಿವಾಳಿ ಕೇಸ್ ನಂಬರ್ 36.

ಹುಕುಂ.

ಮೇಲ್ಕಂಡ ಕೆಂಪೇಗವ್ವಡನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ಕೆಂಪೇಗವ್ವಡನ ಪರವಾಗಿ ಅಡ್ವೊಕೇಟ್ ಮೆ॥ ರಾಘವಾಚಾರ್ಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 4ನೇ ನಂಜಿ ಖುರ್ದು ಹಾಜರ್ 5ನೇ ಕಿಂಗೇಗವ್ವಡನ ತರಫ಼ ಅಡ್ವೊಕೇಟ್ ಮೆ॥ ರಾಜಾರಾಯರು ಇವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ:—1ನೇ ಕೆಂಪಂಣ, 2ನೇ ಗಿರಿಯಮ್ಮ, 3ನೇ ವೆಂಕಟೇಗವ್ವಡ, 6ನೇ ದಾಸಂಣ, 7ನೇ ಕೆಂಪಂಣ, 8ನೇ ಕಾಳೇಗವ್ವಡ, 9ನೇ ಹೊಂಬಾಳಿ, 10ನೇ ರೇವಂಣ, 11ನೇ ಕಾಳಮ್ಮ, 12ನೇ ತಿಪ್ಪಯ್ಯ, 13ನೇ ತಿದ್ದಯ್ಯ, 14ನೇ ಕಾಳಯ್ಯ, 15ನೇ ಬಚ್ಚೇಗವ್ವಡ, 16ನೇ ಹುರ್ಕಿಬಿ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕೆಂಪೇಗವ್ವಡನೆಂಬವನು ಹೊಂದುವದಕ್ಕೆ ಹಕ್ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮೊಹರ್ಪಟ್ಟಿರುತ್ತೆ.

ಸ॥ 1889ನೇ ಇಸವಿ ಆಗಸ್ಟ್ 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರು ಅಥವಾ ದಾವಾದಾತ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಯಬಂದ ಅವರಗಳ ವಾಸಸ್ಥಳ.	ಸಾಲಬಿಲಗ್ಗ.	ಯಾವಾಗ ಲೇಣೇ ಸೇರಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಷರಾ
5	ಶ್ರೀರಂಗಪಟ್ಟಣ ತಾಲ್ಲೂಕು ಬಳಗುಳದಲ್ಲಿ ಇರುವ ಕಿಂಗೇಗವ್ವಡ	120 0 0	..	ಡಿಕ್ರೀ ಬಾಬತ್ತು.	

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರ ತಾಲ್ಲೂಕು ಕುಪ್ಪಹಳ್ಳೀ ಹೋಬಳಿ ಹೊಸಗುಂಡೀಲಿರುವ ಕೆಂಪೇಗವ್ವಡನ ಮಗ ತಿದ್ದೇಗವ್ವಡನ ವಿಷಯದಲ್ಲಿ—

ಸ॥ 1889ನೇ ಇಸವಿ ದಿವಾಳಿ ಕೇಸ್ ನಂಬರ್ 205.

ಹುಕುಂ.

ಮೇಲ್ಕಂಡ ತಿದ್ದೇಗವ್ವಡನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಈ ಕೋರ್ಟು ರೂಬರೂ ಅರ್ಜಿದಾರನಾದ ತಿದ್ದೇಗವ್ವಡನ ಪರವಾಗಿ ಅಡ್ವೊಕೇಟ್ ಮೆಸ್ಸರ್ ನರಸಿಂಗರಾಯರನ್ನೂ ಮತ್ತು ಸದರೀಯವನ ಲೇಣೇದಾರ್ರಾದ 2ನೇ ಕಾಮಂಣ, 3ನೇ ನಂಜಯ್ಯ 4ನೇ ರಂಗಂಣ 5ನೇ ಕೆಂಚೇಗವ್ವಡ 6ನೇ ಚವ್ವಡೇಗವ್ವಡ 7ನೇ ತಿದ್ದಾಚಾರಿ 8ನೇ ತಿದ್ದ ಲಿಂಗಯ್ಯ ಯಿವರಿಗೂ ದರ್ಯಾಫ್ತಿ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು ಯಾರಂದರೆ—1ನೇ ಲಕ್ಷ್ಮಯ್ಯ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಕೆಂಪೇಗವ್ವಡನ ಮಗ ತಿದ್ದೇಗವ್ವಡನು ಹೊಂದುವದಕ್ಕೆ ಹಕ್ದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರಿ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ॥ 1889ನೇ ಇಸವಿ ಆಗಸ್ಟು 7ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಂ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯುವಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ದೇಣಿ ವುಂಟಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಟಿಪ್ಪಣಿ.
2	ಮೈಸೂರು ಕಿಲ್ಲೆಲಿರುವ ವೆಂಕಟರಾಯ ಪುರಭಾಮಂಣ ..	62	4	0	..	ಆಧಾರ ತಮಸೂಕು ಬಾಬತು	
4	ಡಿಟೋ ಪೂರು ರಂಗಣ್ಣ ..	125	8	7		ಡಿಟೋ	
5	ಹೊಸಹುಂಡೀಲಿರುವ ಪಟೇಲ್ ಕೆಂಬೇಗವ್ವಡ ..	24	0	0		ತಮಸೂಕು ಬಾಬತು	
8	ಮೈಸೂರು ಹಳೇ ಅಗ್ರಹಾರದಲ್ಲಿರುವ ಸಿದ್ದಲಿಂಗಪ್ಪ ...	126	9	4		ಡಿಕರೀ ಬಾಬತು	
		338	5	11			

ದಿವಾಳಿಯಾದ ಡಿಕ್ರೀ ದೇಣೇದಾರ ನಂಜೆನಗೂಡು ಕಸಬೆಯಲ್ಲಿರುವ ಹನುಮಂತಯ್ಯನ ಮಗ ಮಗೇ ಪುಟ್ಟಣ್ಣನ ವಿಷಯದಲ್ಲಿ—

ಸ್ಯ 1888ನೇ ಇಸವಿ ದಿವಾಳಿ ಕೇಸ್ ನಂಬರ್ 307.

ಹುಕುಂ.

ಮೇಲ್ಕಂಡ ಮಗೆ ಪುಟ್ಟಣ್ಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ರೂಬರೂ ಅರ್ಜೀದಾರನಾದ ಪುಟ್ಟಣ್ಣನ ಪರವಾಗಿ ಫಸ್ಟ್ ಗ್ರೇಡ್ ಪ್ಲೀಡರ್ ವೆಂಕಟರಾವಯ್ಯನವರುನ್ನೂ ಮತ್ತು ಸದರೀಯವನ ಲೇಣೇದಾರ್ರಾದ 19ನೇ ಮಂಡಿ ಕೇಶವಯ್ಯನ ಕಡೆ ಆಡ್ವೋಕೇಟ್ ಕೃಷ್ಣಯ್ಯಂಗಾರ್ 18ನೇ ಮೊಹರ್ದಿನಾಬೀ ಕಡೆ ಫಸ್ಟ್ ಗ್ರೇಡ್ ಪ್ಲೀಡರ್ ಸುಬ್ಬರಾಯರು ಯಿವರುಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತಿ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—1ನೇ ಶ್ರೀಕಂಠೇಶ್ವರ ಬ್ಯಾಂಕ್ 2ನೇ ನಾರಣಪ್ಪ 3ನೇ ಶ್ರೀಕಂಠಜೋಯಿಸ 4ನೇ ನಂಜಪ್ಪ 5ನೇ ಪುಟ್ಟಸಾಮಿಕಟ್ಟೆ 6ನೇ ಚಿಕ್ಕಪುಟ್ಟಸಾಮಿಕಟ್ಟೆ 7ನೇ ಪುಟ್ಟಸಾಮಿರಾ 8ನೇ ಬಿಳಿಗಿರಿ ರಂಗಾಚಾರಿ 9ನೇ ಮಗೇ ನಾಗಂಣ 10ನೇ ದಾಸಪ್ಪ 11ನೇ ಮಸ್ತ್ರ್ತಸಾಬಿ 12ನೇ ಖಾಂಬೇಗಸಾಬಿ 13ನೇ ಬಸರಾನಿಕೆಂಪಂಣ 14ನೇ ಚಿಕ್ಕಮುದ್ದಪ್ಪ 15ನೇ ಸುಡಗಾಡಪ್ಪ 16ನೇ ಸುಡಗಾಡಪ್ಪ 17ನೇ ಚಿಕ್ಕನಾಗಯ್ಯ 20ನೇ ಚನ್ನಬಸಂಣ 21ನೇ ಸುಬ್ಬರಾಯಕಟ್ಟೆ 22ನೇ ಕಾಡಬಸಪ್ಪ 23ನೇ ಅನಂತಪ್ಪ.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮಗೆ ಪುಟ್ಟಣ್ಣನು ಹೊಂದುವದಕ್ಕೆ ಪಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕೋಸ್ಕರವಾಗಿಯಾಗಲಿ ದಸ್ತಗಿರಿಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ 1889ನೇ ಇಸವಿ ಆಗಸ್ಟ್ 14ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರು.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯ ಬಂದ ಅವರುಗಳ ವಾಸಸ್ಥಳ.	ಮೊಬಲಗು.			ಯಾವಾಗ ದೇಣಿ ವುಂಟಾದದ್ದು.	ದೇಣಿಯ ಸ್ವಭಾವಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಟಿಪ್ಪಣಿ.
1	ನಂಜಿನಗೂಡು ಶ್ರೀಕಂಠೇಶ್ವರಬ್ಯಾಂಕ ..	422	7	0	..	ಡಿಕರೀ ಬಾಬತು	
8	ಬಿಳಿಗಿರಿ ರಂಗಾಚಾರಿ ..	50	0	0	..	ಡಿಟೋ	
19	ಬೆಂಗಳೂರು ಮಂಡೀ ಕೇಶವಯ್ಯ ..	400	0	0	..	ಡಿಟೋ	
21	ಬೇಲೂರು ಸುಬ್ಬರಾಯಕಟ್ಟೆ ..	70	0	0	..	ಡಿಟೋ	
22	ಮಡಿಕೇರೀ ಕಾಡಬಸಪ್ಪ ..	140	0	0	..	ಡಿಟೋ	
		1082	7	0			

ಸಿ. ಶ್ರೀನಿವಾಸಯ್ಯಂಗಾರ್, ಸಬ್ ಜಡ್ಜ್.